**2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಸ್.ಸಿ.ನಂಃ– 188/2022**

ಪಿ.ಡಬ್ಲ್ಯೂಃ– 2
ಸಿ.ಡಬ್ಲ್ಯೂಃ– 2

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಪವಿತ್ರಬಾಯಿ |
| ಗಂಡನ ಹೆಸರುಃ | : | ಶಂಕರನಾಯಕ |
| ವಯಸ್ಸುಃ | : | 25 ವರ್ಷ |
| ವೃತ್ತಿಃ | : | ಗೃಹಿಣಿ |
| ವಾಸಃ | : | ಪುರಲೆಹಳ್ಳಿ, ಬಾಣಾವರ. |

**ದಿನಾಂಕಃ 02–07–2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಎಲ್ಲಾ ಆರೋಪಿತರ ಪರಿಚಯ ಇದೆ. ಮೃತ ಶರತ್ ನನ್ನ ದೊಡ್ಡಮ್ಮನ ಮಗ, ನನಗೆ ಅಣ್ಣನಾಗಬೇಕು. ಚಾಸಾ–1 ನನ್ನ ದೊಡ್ಡಮ್ಮ, ಚಾಸಾ–3 ನನ್ನ ಅಣ್ಣ, ಚಾಸಾ–4 ನನ್ನ ತಂದೆ. ಚಾಸಾ–6 ನನ್ನ ತಾಯಿ. ಚಾಸಾ–7 ನನ್ನ ಅಜ್ಜಿ ಚಾಸಾ–5, 8 ರಿಂದ 10 ಅವರು ನಮ್ಮ ಗ್ರಾಮದವರು.

2. ದಿನಾಂಕಃ 16.01.2022 ರಂದು ನನ್ನ ಮಾವ ಚಾಸಾ–8 ಗಿರೀಶನಾಯಕ ರವರು ಸಕರಾಯಪಟ್ಟಣದಲ್ಲಿರುವ ಚೌಡೇಶ್ವರಿ ದೇವಸ್ಥಾನದಲ್ಲಿ ಸಮಾರಂಭ ಇಟ್ಟುಕೊಂಡಿದ್ದು ಅದಕ್ಕೆ ಆರೋಪಿತರನ್ನು ಕರೆದಿರುವುದಿಲ್ಲ ಎಂಬ ಕಾರಣಕ್ಕೆ ಆರೋಪಿತರು ಚಾಸಾ–3, ಚಾಸಾ–14 ಹಾಗೂ ಮೃತ ಶರತ್ ನೊಂದಿಗೆ ಜಗಳ

ಮಾಡಿರುತ್ತಾರೆ. ದಿಃ16.01.2022 ರಂದೇ ರಾತ್ರಿ 8.30 ಗಂಟೆಗೆ ಆರೋಪಿತರೆಲ್ಲರೂ ಸೇರಿಕೊಂಡು ನಮ್ಮ ಮನೆಯಿಂದ ಎರಡು ಮನೆ ಆದ ಬಳಿಕ ಬಸ್ ನಿಲ್ದಾಣ ಇದ್ದು, ಅಲ್ಲಿ ಚಾಸಾ–3, ಮೃತ ಶರತ್ ಹಾಗೂ ಚಾಸಾ–14 ರವರೊಂದಿಗೆ ನಮ್ಮನ್ನು ಸಮಾರಂಭಕ್ಕೆ ಕರೆದಿರುವುದಿಲ್ಲ ಎಂದು ಅವಾಚ್ಯ ಶಬ್ದಗಳಿಂದ ಬೈದು ಜಗಳ ಮಾಡಿರುತ್ತಾರೆ. ಅದೇ ದಿನ ರಾತ್ರಿ 10.30 ಗಂಟೆಗೆ ಆರೋಪಿತರು ನಾವು ಮನೆಯಲ್ಲಿದ್ದಾಗ ಊರಿನ ಕೆರೆಯ ಬಳಿ ಇರುವ ತಮ್ಮ ಮನೆಯಿಂದ ನಮ್ಮ ಮನೆಯ ಬಳಿಗೆ ಬಂದು ಆರೋಪಿಗಳು ಕೂಗಾಡುತ್ತಿದ್ದರು. ಆಗ ನಾವು ಮನೆಯಿಂದ ಹೊರಗೆ ಬಂದೆವು. ನನ್ನ ಅಣ್ಣ ಶರತ್ ಒಬ್ಬನೇ ಸಿಕ್ಕಿದ್ದಾನೆ ಎಂದು ಆರೋಪಿತರು ತಮ್ಮ ಕೈಯಲ್ಲಿ ಹಿಡಿದುಕೊಂಡು ಬಂದಿದ್ದ ದೊಣ್ಣೆಯಿದ ಆತನ ತಲೆಗೆ, ಮೈಕೈಗೆ, ಕಾಲಿಗೆ ಹಲ್ಲೆ ಮಾಡಿದರು, ಬಿಡಿಸಲು ಹೋದ ನನಗೂ ಹಾಗೂ ಚಾಸಾ–1 ರವರಿಗೂ ಸಹ ಆರೋಪಿತರು ಹಲ್ಲೆ ಮಾಡಿರುತ್ತಾರೆ. 1ನೇ ಆರೋಪಿ ದೊಣ್ಣೆಯಿಂದ ಶರತ್ ನ ತಲೆಗೆ ಹಾಗೂ ಆರೋಪಿ–2 ಮತ್ತು 3 ರವರು ದೊಣ್ಣೆಗಳಿಂದ ಮೃತನ ಮೈಕೈ ಹಾಗೂ ಕಾಲಿಗೆ ಹೊಡೆದಿರುತ್ತಾರೆ. ಬಿಡಿಸಲು ಹೋಗಿದ್ದ ನನಗೆ ಆರೋಪಿ–4 ಮತ್ತು 5 ರವರು ಕೈಗಳಿಂದ ನನ್ನ ಕತ್ತನ್ನು ಹಿಡಿದು ಹಲ್ಲೆ ಮಾಡಿರುತ್ತಾರೆ ಹಾಗೂ 3ನೇ ಆರೋಪಿ ದೊಣ್ಣೆಯಿಂದ ನನ್ನ ಹಿಂಭಾಗದ ಸೊಂಟಕ್ಕೆ ಹೊಡೆದಿರುತ್ತಾನೆ. ಚಾಸಾ–1 ರವರಿಗೂ ಸಹ ಆರೋಪಿ–1 ರಿಂದ 3 ರವರುಗಳು ದೊಣ್ಣೆಗಳಿಂದ ಹಲ್ಲೆ ಮಾಡಿರುತ್ತಾರೆ. ನನ್ನ ಅಣ್ಣ ಚಾಸಾ–3 ಯೋಗೇಶನಾಯಕನಿಗೆ ಆರೋಪಿ–1 ರಿಂದ 3 ರವರು ದೊಣ್ಣೆಗಳಿಂದ ಕಾಲು ಹಾಗೂ ಕೈಗಳಿಂದ ಹಲ್ಲೆ ಮಾಡಿರುತ್ತಾರೆ. ಆ ಸಮಯದಲ್ಲಿ ಚಾಸಾ–4 ರಿಂದ 9 ರವರು ಬಂದು ಆರೋಪಿಗಳಿಂದ ನಮ್ಮನ್ನು ರಕ್ಷಿಸಿರುತ್ತಾರೆ.

3. ನಂತರ ನಾವುಗಳು ಮೃತನನ್ನು ಅರಸೀಕೆರೆ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ

ಕರೆದುಕೊಂಡು ಹೋದೆವು. ಅಲ್ಲಿನ ವೈದ್ಯಾಧಿಕಾರಿಗಳು ಮೃತನಿಗೆ ಚಿಕಿತ್ಸೆ ನೀಡಿ ಇಲ್ಲಿ ಆಗುವುದಿಲ್ಲ, ಹಾಸನದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಕಳುಹಿಸಿಕೊಟ್ಟರು. ನಾವು ಮೃತನನ್ನು ಹಾಸನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು, ಸದರಿ ಹಾಸನದ ಆಸ್ಪತ್ರೆಯಿಂದ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತಾರೆ. ನಂತರ ನಿಮಾನ್ಸ್ ಆಸ್ಪತ್ರೆಯಿಂದ ಕಣ್ವ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ಮೃತ ಶರತ್ ನನ್ನು ಸೇರಿಸಲಾಯಿತು. ಕಣ್ವ ಆಸ್ಪತ್ರೆಯ ವೈದ್ಯಾಧಿಕಾರಿಗಳು ಇಲ್ಲಿ ಆಗುವುದಿಲ್ಲ, ಶರತ್ ಉಳಿಯುವುದಿಲ್ಲ ವಾಪಸ್ ಕರೆದುಕೊಂಡು ಹೋಗಿ ಎಂದು ಹೇಳಿದ್ದು, ನಂತರ ಶರತ್ ನನ್ನು ವಾಪಸ್ ಕರೆದುಕೊಂಡು ಬರುವಾಗ ನೆಲಮಂಗಲದ ಟೋಲ್ ಬಳಿ ಶರತ್ ಸತ್ತು ಹೋಗಿರುತ್ತಾನೆ.

4. ಘಟನೆಗೆ ಸಂಬಂಧಿಸಿದಂತೆ ಚಾಸಾ-1 ರವರು ದೂರನ್ನು ನೀಡಿರುತ್ತಾರೆ. ನಾನೂ ಸಹ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಸಮಾರಂಭಕ್ಕೆ ಇವರಿವರೇ ಹೋಗಿ ಬಂದಿದ್ದಾರೆ ಎಂಬ ದ್ವೇಷದಿಂದ ಅವಾಚ್ಯ ಶಬ್ದಗಳಿಂದ ಬೈದು ಇವರನ್ನು ಉಳಿಸಬಾರದು ಎಂದು ಬೆದರಿಕೆ ಹಾಕಿ ಸಾಯಿಸುವ ಉದ್ದೇಶದಿಂದ ಆರೋಪಿತರೆಲ್ಲರೂ ಸೇರಿ ಹಲ್ಲೆ ಮಾಡಿರುತ್ತಾರೆ. ಸಾಕ್ಷಿಯು ಕೃತ್ಯ ಸ್ಥಳದ ಫೋಟೋವನ್ನು ಮತ್ತು ಮೃತ ಶರತ್ ನ ಶವ ಇರುವ ಫೋಟೋಗಳನ್ನು ನೋಡಿ ಗುರುತಿಸಿದ್ದು, ಸದರಿ ಫೋಟೋಗಳನ್ನು ಈಗಾಗಲೇ ನಿಪಿ-4 ರಿಂದ 8ಕ್ಕೆ ಗುರುತಿಸಲಾಗಿದೆ.

5. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮೂರು ದೊಣ್ಣೆಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಮುಮಾ-1 ರಿಂದ 3ಕ್ಕೆ ಗುರುತಿಸಲಾಗಿದೆ. ನಾನು, ಚಾಸಾ-1 ರವರು ಅರಸೀಕೆರೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇವೆ. ಪೊಲೀಸರು

ಕೃತ್ಯಕ್ಕೆ ಸಂಬಂಧಿಸಿದಂತೆ ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ ಎ ಎಂ ವಕೀಲರಿಂದಃ**

ಶ್ರೀ ಎಂ ಎ ಎಂ ವಕೀಲರು ಕಲಂ. 232(2) ರಡಿಯಲ್ಲಿ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯನ್ನು ನ್ಯಾಯಾಲಯ ಪುರಸ್ಕರಿಸಿದ ಕಾರಣ ಪಾಟಿ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.